ಕಡಿಮೆ ದುಡ್ಡಿಗೆ ಏನು ಸಿಕ್ಕಿದರೂ ನೀವು ರೆಡಿ, ಆ ಜಾಗ ಎಷ್ಟು ಜನರ ಬಲಿ ತೆಗೆದುಕೊಳ್ಳುತ್ತದೋ ಗೊತ್ತಿಲ್ಲ' ಸುಮಂಗಲಾ ಕಿರುಚಾಡ ತೊಡಗಿದಾಗ 'ಆಡಲು ಹೋದ ಮಗ ಅಜಾಗ್ರತೆಯಿಂದ ಸರಿಯಾಗಿ ಗಮನಿಸದೇ ಮೋರಿಗೆ ಬಿದ್ದದ್ದು ಅವನದ್ದೇ ತಪ್ಪು, ಸೈಟೇನು ಮಾಡಿದೆ?' ವಾಸುವಿನ ಮನಸ್ಸಿಗೆ ಬಂದ ಮಾತುಗಳು ಆಡಲಾಗದೆ ಅಲ್ಲಿಂದ ಕಾಲು ಕಿತ್ತ. ವಾಸುವಿನ ಬೆನ್ನು ಹತ್ತಿದ ವಾಸ್ತು ತಾನಿದ್ದೇನೆಂದು ಆಗಾಗ ಕಾಣಿಸಿಕೊಂಡು ಮನೆಯವರು ಹೆದರುವಂತೆ ಮಾಡಿ, ವಾಸುವನ್ನು ಹಿಂಡಿ ಹಿಪ್ಪೆ ಮಾಡುತ್ತಿತ್ತು.

ಹರಸಾಹಸ ಮಾಡಿ ಸ್ಯಾಂಕ್ಷನ್ ಆದ ದುಡ್ಡು ಬ್ಯಾಂಕಿನಿಂದ ಸಿಕ್ಕಿದಾಗ ಮನೆಯ ಕೆಲಸ ಮುಂದುವರಿಯಿತು. ಮನೆ ಕಟ್ಟುವಾಗ ಬಂದ ವಾಸುವಿನ ಸ್ನೇಹಿತರ, ಬಂಧುಗಳ ಮತ್ತು ಸುಮಂಗಲಾಳ ಸ್ನೇಹಿತರ ಸಲಹೆಯ ಮೇರೆಗೆ ಮನೆಯ ಕಿಟಕಿ, ಬಾಗಿಲಿನ ಸ್ಥಾನ, ಅಡುಗೆ ಮನೆ, ದೇವರಕೋಣೆ, ಬಾತ್‌ರೂಮಿನ ದಿಕ್ಕುಗಳು ಹಲವು ಸಲ ಬದಲಾಯಿಸಲ್ಪಟ್ಟವು. ಶುಭವೆಂದು ಚಿತ್ರ ವಿಚಿತ್ರ ಬಣ್ಣಗಳು ಗೋಡೆಗಳಿಗೆ ಹಚ್ಚಲ್ಪಟ್ಟಿತು, ವಾಸುವಂತೂ ಗಾಳಿ ಬಂದತ್ತ ತಿರುಗುವ ಗಿರಿಗಿಟ್ಟಿಯಂತಾದ, ಇವುಗಳೆಲ್ಲ ಮನೆಗೆ ಶುಭ ತಂದವೋ ಬಿಟ್ಟವೋ ಖರ್ಚಂತೂ ವಾಸುವಿನ ಬಜೆಟ್ಟಿನ ದುಪ್ಪಟ್ಟಾಯಿತು, ಇದರಿಂದ ವಾಸುವಿನ ಬೆನ್ನು ಇನ್ನೂ ಬಗ್ಗಿತು, ಸಾಲ ತೀರಿಸುವ ದಾರಿ ಕಾಣದೆ ಮುಖದಲ್ಲಿ ಚಿಂತೆಯ ಗೆರೆಗಳು ಮೂಡಿದವು.

ಅಂತೂ ಇಂತೂ ಮನೆ ಕಟ್ಟುವ ಕೆಲಸ ಮುಗಿಯಿತು. ಗೃಹಪ್ರವೇಶ ಎರಡು ಸಲ ಮುಂದೂಡಲ್ಪಟ್ಟಿತು. ಮೂರನೆಯ ಸಲ ಇಟ್ಟ ಗೃಹಪ್ರವೇಶದಂದು ಗೃಹ ಪ್ರವೇಶವಾದರೂ, ಮಾಡಿದ ಅಡುಗೆ ಮೇಲೆ ಟಾರ್ಪಲ್ ಬಿದ್ದು ಅಡುಗೆ ವೇಸ್ಟ್ ಆದಾಗ ಪಕ್ಕದ ಹೋಟೆಲ್‌ನಿಂದ ಅಡಿಗೆ ತರಿಸಿ ಬಂದವರಿಗೆ ಬಡಿಸ ಲಾಯಿತು. ವಾಸ್ತು ಸರಿಯಿಲ್ಲದ ಜಾಗ ತೆಗೆದುಕೊಂಡು, ಮನೆ ಕಟ್ಟಿ, ಯಾರ ಮಾತನ್ನೂ ಕೇಳದೆ ಆಷಾಡದಂದು ಗೃಹಪ್ರವೇಶ ಮಾಡಿದ ವಾಸುವನ್ನು ಎಲ್ಲರೂ ಮೂರ್ಖ, ಖಳನಾಯಕನಂತೆ ಕಾಣತೊಡಗಿದಾಗ ವಾಸು ಜನರ ಮುಖವನ್ನು ನೋಡುವುದನ್ನೇ ಬಿಟ್ಟ, ಮಾತೂ ಕಡಿಮೆಯಾಯಿತು. ಕಿಟ್ಟಿ ಫ್ರೆಂಡ್ಸ್ ಎಲ್ಲ ಸುಮಂಗಲಾಳಿಂದ ಒಬ್ಬೊಬ್ಬರೇ ದೂರವಾಗತೊಡಗಿದಾಗ ಸುಮಂಗಲಾ ಒಂದು ತರಹದ ಡಿಪ್ರೆಷನ್‌ಗೆ ಒಳಗಾದಳು.

* * *

ಗೃಹಪ್ರವೇಶವಾಗಿ ಒಂದು ವಾರದೊಳಗೆ ವಾಸುವಿನ ಸಂಸಾರ ಬಾಡಿಗೆ ಮನೆಯಿಂದ ಹೊಸ ಮನೆಗೆ ಸಾಗಿತು. ಹೊಸ ಮನೆ ಸಾಕಷ್ಟು ವಿಶಾಲವಾಗಿದ್ದು ಗಾಳಿ ಬೆಳಕು ಸರಿಯಾಗಿ ಬರುತ್ತಿತ್ತು. ಯಾರು ಏನೇ ಹೇಳಿದರೂ ಸ್ವಂತ ಮನೆ ಕಟ್ಟಿಸಿದ ನೆಮ್ಮದಿ ವಾಸುವಿಗಾಗತೊಡಗಿತು. ಮಕ್ಕಳಿಗೂ ಹೊಸ ಹೊಸ ಫ್ರೆಂಡ್ಸ್ ಸಿಕ್ಕರು, ಆಟ ಆಡಲು ಪಾರ್ಕೂ ಹತ್ತಿರವೇ ಇತ್ತು. ಸುಮಂಗಲಾಳಿಗೆ ಮಾತ್ರ ಕಿಟ್ಟಿ ಫ್ರೆಂಡ್ಸ್‌ನಿಂದ ದೂರವಾಗಿ ಮನಸ್ಸು ಚಡಪಡಿಸುತ್ತಿತ್ತು. ವಾಸುವಿನ ಅಮ್ಮನಿಗೂ ತನಗಾಗಿ ಪ್ರತ್ಯೇಕ ಕೊಠಡಿ ಇರುವ ಹೊಸ ಮನೆ ಇಷ್ಟವಾಗತೊಡಗಿತು, 'ವಾಸು ಮನೇಲಿ ಗಾಳಿ ಬೆಳಕಿಗೇನೂ ಕಡಿಮೆ ಇಲ್ಲ. ಆ ಬಾಡಿಗೆ ಮನೆಯಲ್ಲಿ ಉಸಿರು ಕಟ್ಟಿದ ಹಾಗಿತ್ತು ನೋಡು. ಬೇಸಿಗೆಯಲ್ಲಿ ಹಪ್ಪಳ, ಸಂಡಿಗೆ ಮಾಡಿ ಮೇಲೆ ಒಣಗಿಸಬಹುದು, ವಿಶಾಲವಾದ ಜಾಗವಿದೆ, ಆದ್ರೆ ನಿನ್ನ ಹೆಂಡತಿಗೆ ಪುರುಸೊತ್ತು ಸಿಗಬೇಕಲ್ಲ, ನಾವೆಲ್ಲ ಹಿಂದೆ ಡಬ್ಬಿಗಟ್ಟಲೆ ಹಪ್ಪಳ ಸಂಡಿಗೆ ಮಾಡಿದವರು, ಈಗಿನ ಹೆಣ್ಣು ಮಕ್ಕಳಿಗೆ...' ಎನ್ನುತ್ತ ಸೊಸೆಯನ್ನ ಓರೆಗಣ್ಣಿನಿಂದ ನೋಡಿದಾಗ ಸುಮಂಗಲಾ ಮುಖ ತಿರುವಿ ಅಡುಗೆ ಮನೆ ಹೊಕ್ಕು ಸಿಟ್ಟನ್ನು ಪಾತ್ರೆಗಳ ಮೇಲೆ ತೀರಿಸಿಕೊಂಡಳು.

ಎಲ್ಲವೂ ಸರಿಯಾಗಿತ್ತು, ಎಲ್ಲವೂ ಸರಿಯಾಗುವಂತೆ ಕಾಣಿಸುತ್ತಿತ್ತು ಹೊಸ ಮನೆಯಲ್ಲಿ. ಆದರೆ ಹೊಸ ಮನೆಗೆ ಸೇರಿ ಮೂರು ತಿಂಗಳೊಳಗೆ ಸರಿಯಾಗಿ ಓಡಾಡಿಕೊಂಡಿದ್ದ ವಾಸುವಿನ 83 ವರ್ಷದ ಅಮ್ಮ ರಾತ್ರಿ ಮಲಗಿದವರು ಬೆಳಿಗ್ಗೆ ಏಳಲಿಲ್ಲ. ಮತ್ತೆ ಶುರುವಾಯಿತು ಜನರ ಚುಚ್ಚುನೋಟ, ವ್ಯಂಗ್ಯ ಮಾತುಗಳು, ಮನೆಯ ವಾಸ್ತುವಿನ ಬಗ್ಗೆ ಚರ್ಚೆಗಳು. ಅಲ್ಲ 'ಅಮ್ಮ ಹೋದ ದುಃಖ ನನಗೂ ಇದೆ, ಆದರೆ ಅಮ್ಮನಿಗೂ ವರ್ಷ ಎಂಬತ್ತಮೂರಾಗಿತ್ತು, ಹೂವೆತ್ತಿದಂತೆ ಅಮ್ಮ ಸ್ವರ್ಗಕ್ಕೆ ನಡೆದಳು, ಒಂದು ದಿನವೂ ನರಳಲಿಲ್ಲ, ಇನ್ನೇನು ಬೇಕು? ಅದಕ್ಯಾಕೆ ಮನೆ, ವಾಸ್ತುವನ್ನು ದೂರಬೇಕು' ಎಂದುಕೊಂಡ ಮನಸ್ಸಿನಲ್ಲೇ. ಇದೆಲ್ಲ ಹೇಳ ಹೋದರೆ ಎಂತ ಮಗನಪ್ಪ, ಅಮ್ಮ ಹೋದ ದುಃಖವೇ ಇಲ್ಲ ಇವನಿಗೆ ಎಂದುಕೊಂಡಾರೆಂದು ಬಾಯಿ ಮುಚ್ಚಿಕೊಂಡ.

***

ಮನೆ ಕಟ್ಟುವುದರಲ್ಲಿ ವಾಸುವಿನ ಬಜೆಟ್ ಏರುಪೇರಾಗಿದ್ದರೂ, ಮನೆ ಕಟ್ಟಿ ಒಂದು ವರ್ಷವಾಗುತ್ತಿದ್ದಂತೆ ಮನೆಯೆದುರು ವಾಸುವಿನ ಹೊಸ ಮಾರುತಿ ಕಾರು ನಿಲ್ಲತೊಡಗಿತು. ವಾಸುವಿಗೆ ಪ್ರಮೋಶನ್ ಸಿಕ್ಕಿ ಆಫೀಸರ್ ಆದ. ಮಕ್ಕಳು ಮನೆಯ ಹತ್ತಿರದ ಶಾಲೆಗೆ ಸೇರಿಕೊಂಡರು, ಸುಮಂಗಲಾ ಫ್ರೆಂಡ್ಸ್ ಇಲ್ಲದೆ ಬೇಜಾರಾಗಿ ತನ್ನ ಮಕ್ಕಳಿಗಲ್ಲದೇ ಅಕ್ಕಪಕ್ಕದ ಮಕ್ಕಳಿಗೂ ಪಾಠ ಹೇಳಿಕೊಟ್ಟು ಸಂಪಾದಿಸ ತೊಡಗಿದಳು. ಮಕ್ಕಳು ಕ್ಲಾಸಿನಲ್ಲಿ ಒಳ್ಳೆಯ ಮಾರ್ಕ್ಸ್ ತೆಗೆದುಕೊಂಡವು.

ಮತ್ತಾವ ಕೆಟ್ಟ ಘಟನೆಗಳು ಘಟಿಸದೇ ಜನರು ಮನೆಯ ವಾಸ್ತುವನ್ನು ಮರೆಯತೊಡಗಿದರು. ವಾಸುವಿಗೆ ಮಾತ್ರ ಇನ್ನೂ ಗೊಂದಲ, ನಿಜಕ್ಕೂ ಈ ಜಾಗದ ವಾಸ್ತು ಸರಿ ಇಲ್ಲವೇ? ಮನೆಗೆ ಜಾಗ ತೆಗೆದುಕೊಳ್ಳುತ್ತಿದ್ದಂತೆ ತೊಂದರೆಗಳ ಸರಮಾಲೆಯೇಕೆ ನನ್ನ ಕುತ್ತಿಗೆಗೆ ಬಿತ್ತು? ಇಲ್ಲ ಎಲ್ಲವೂ ಕಾಕತಾಳೀಯವೇ? ಸ್ವಂತ ಬೆವರಿನಿಂದ ಕಟಿಸಿದ ಮನೆ 'ಮಂಗಳ' ಅಮಂಗಳವೇ? ಹಾಗಾದರೆ ಈಗೆಲ್ಲಿ ಆ ತೊಂದರೆಗಳೆಲ್ಲಾ? ಈ ವಿಶ್ವದಲ್ಲಿ ಎಷ್ಟು ಜನ ವಾಸ್ತುವನ್ನು ನಂಬುತ್ತಾರೆ? ಎಷ್ಟು ಜನ ವಾಸ್ತುವಿನ ಪ್ರಕಾರ ಮನೆ ಕಟ್ಟುತ್ತಾರೆ? ವಾಸ್ತು ಸರಿಯಿಲ್ಲವೆಂದು ಎಷ್ಟು ಮನೆಗಳು ಹಾಳಾಗಿ ಹೋಗಿವೆ? ವಾಸ್ತು, ಜಾತಕ, ಜ್ಯೋತಿಷಿ.. ಮುಂತಾದವುಗಳನ್ನು ನೋಡದೇ ಮನೆ ಕಟ್ಟಿಸಿದವರು, ಖರೀದಿಸಿದವರು ನೆಮ್ಮದಿಯಾಗಿ ಜೀವನ ನಡೆಸುತ್ತಿಲ್ಲವೇ..?



## ವಿಪರ್ಯಾಸ

ನಿತ್ಯ ಹಸಿರ ದಮನಿಸಿ
ಮಾಡುವರು ಭೂತಾಯಿಯ
ವಿಧವೆ...
ನಂತರ ಮಳೆ ಬರಲು
ಕಪ್ಪೆಗೆ ಕತ್ತೆಗೆ
ಮದುವೆ..

★ ಭಾಸ್ಕರ ಕೆ.

